**ಓ. ಎಸ್ . 26/2016**

**ಡಿ.ಡಬ್ಲ್ಯೂ- 1**

ದಿನಾಂಕ **05-09-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟಿ ಸವಾಲು ಃ ಶ್ರೀ ಕೆ ಬಿ ಕೆ. ವಾದಿ ಪರ ವಕೀಲರಿಂದ -

ನಾನು ಪಿಯುಸಿ ಓದಿರುತ್ತೇನೆ. ನಾನು ಸರ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಎ.ಡಿ.ಎಲ್.ಆರ್. ಆಗಿ ಹುಕ್ಕೇರಿ ಸರ್ವೆ ಕಛೇರಿಯಲ್ಲಿ 2019 ರಲ್ಲಿ 6 ತಿಂಗಳು ಮಾತ್ರ ಕೆಲಸ ಮಾಡಿರುತ್ತೇನೆ. 1985 ರಲ್ಲಿ ನಾನು ನೇಮಕಗೊಂಡಿದ್ದು ಮೊದಲಿಗೆ ನಾನು ಹಾವೇರಿಯಲ್ಲಿ ಕೆಲಸ ಮಾಡಿರುತ್ತೇನೆ. 2019 ರಲ್ಲಿ ಕೆಲಸ ಮಾಡಿದ್ದನ್ನು ಬಿಟ್ಟು ಹುಕ್ಕೇರಿಯಲ್ಲಿ ನಾನು ಸರ್ವೆಯರ ಆಗಿ ಕೆಲಸ ಮಾಡಿರುವುದಿಲ್ಲ. ವಾದಿಯು ಮನೆಗಳನ್ನು ಅಡ್ಡದಿಡ್ಡಿಯಾಗಿ ಕಟ್ಟಿದ ಎಂದು ಪ್ರದ್ರಿ ದಾವೆಯನ್ನು ಮಾಡಿರುತ್ತಾರೆ. ದಾವೆ ನೋಟಿಸು ನನಗೆ ಬಂದಿರುತ್ತದೆ. ನಾನು ಲಿಖಿತ ಹೇಳಿಕೆಯನ್ನು ಓದಿ ಸಹಿ ಮಾಡಿರುತ್ತೇನೆ. ದಾವಾ ಆಸ್ತಿ ಸರ್ವೆ ನಂಬರ ನನಗೆ ಹೇಳಲು ಬರುವುದಿಲ್ಲ. ಆದರೆ ಬ್ಲಾಕ ನಂ. 118 ಇರುತ್ತದೆ. ಬ್ಲಾಕ ನಂ. 118 ಇದು ಒಟ್ಟು 7 ಎಕರೆ 13 ಗುಂಟೆ ಕ್ಷೇತ್ರ ಇರುತ್ತದೆ. ಮೊದಲು 7 ಎಕರೆ 13 ಗುಂಟೆಯಲ್ಲಿ ಎಷ್ಟು ಕ್ಷೇತ್ರ ಬಿನ್ ಶೇತಗಿ ಆಗಿರುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ.

ನಾವು ಖರೀದಿ ಮಾಡುವ ಪೂರ್ವದಲ್ಲಿ ಎಷ್ಟು ಎಕರೆ ಬಿನ್ ಶೇತಗಿ 2 ಎಕರೆ ಆಗಿತ್ತು ಅದರ ಪೈಕಿ ಪ್ಲಾಟ ನಂ. 47 ನ್ನು ಖರೀದಿ ತೆಗೆದುಕೊಂಡಿರುತ್ತೇನೆ. ಸಾಮಾನ್ಯವಾಗಿ ಒಂದು ಕೃಷಿ ಜಮೀನು ಬಿನ್ ಶೇತಗಿ ಆಗಬೇಕಾದರೆ ಮೊದಲು ಪ್ಲಾನ ಆಗಿ ಮುನ್ಸಿಪಾಲ್ಟಿಯಲ್ಲಿ ಅನುಮೋದನೆ ಪಡೆದು ನಂತರ ಯೋಜನಾ ನಿರ್ದೇಶಕರು, ನಿಪ್ಪಾಣಿಯವರಲ್ಲಿ ಅನುಮೋದನೆ ಪಡೆಯಬೇಕಾಗುತ್ತದೆ ಎಂದರೆ ಸರಿ. ನಾವು ಖರೀದಿ ತೆಗೆದುಕೊಳ್ಳುವ ಸಮಯದಲ್ಲಿ ಈ ಮೇಲಿನ ಎಲ್ಲಾ ದಾಖಲೆಗಳನ್ನು ನೋಡಿರುತ್ತೇನೆ. ಪ್ಲಾಟ ನಂ. 47 ಕ್ಕೆ ಸಂಬಂಧಿಸಿದಂತೆ ಬಿನ್ ಶೇತಗಿ ಆದಂತಹ ಲೇಔಟ ಪ್ಲಾನ ಮತ್ತು ಮುನಸಿಪಾಲ್ಟಿ ಅನುಮೋದನೆ ಮತ್ತು ಸಿ ಟಿ ಎಸ್ ಉತಾರನ್ನು ನ್ಯಾಯಾಲಯದಲ್ಲಿ ಹಾಜರ ಪಡಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಟಿ ಎಂ ಸಿ ಮತ್ತು ಸಿಟಿಎಸ್ ಉತಾರಗಳನ್ನು ಹಾಜರ ಪಡಿಸಿರುತ್ತೇನೆ ಎನ್ನುತ್ತಾರೆ. ಟಿ ಎಂ ಸಿ ಮತ್ತು ಸಿಟಿಎಸ್ ಉತಾರಗಳಲ್ಲಿ ಖರೀದಿ ತೆಗೆದುಕೊಳ್ಳುವ ಪೂರ್ವದಲ್ಲಿ ಮಾಲಿಕರಾದ ಮೊಹಮ್ಮದ ಶಫಿ ಗಜಬರಸಾಬ ನದಾಫ ಇವರ ಹೆಸರು ಇತ್ತು. ಸಾಮಾನ್ಯವಾಗಿ ಖರೀದಿ ಪತ್ರದಲ್ಲಿ ನಮೂದಿಸಿದ

ನಂಬರಗಳನ್ನು ಟಿ ಎಂ ಸಿ ಮತ್ತು ಸಿಟಿಎಸ್ ಉತರಗಳಲ್ಲಿ ನಮೂದು ಮಾಡುತ್ತಾರೆ ಎಂದರೆ ಸರಿ . ಆ ಪ್ರಕಾರ ನಾವು ಖರೀದಿ ಮಾಡಿದ ಸಿ ಟಿ ಎಸ್ ನಂ. 4335 ಇರುತ್ತದೆ. ನಿ.ಡಿ-11 ರ ದಾಖಲೆ ಖರೀದಿ ಪತ್ರ ಇರುತ್ತದೆ. ಖರೀದಿ ಪತ್ರದ ಪ್ರಕಾರ ಟಿ ಎಂ ಸಿ ಮತ್ತು ಸಿ ಟಿ ಎಸ್ ನಲ್ಲಿ ಎರಡೂ ಕಡೆಗೆ ನನ್ನ ಹೆಸರು ನಮೂದು ಆಗಿರುತ್ತದೆ ಎಂದರೆ ಸರಿ . ನಿ.ಡಿ-36 ರಲ್ಲಿ ಸಿ ಟಿ ಎಸ್ ನಂ. 4335/ಎ/ 47 ಎಂದು ನಮೂದು ಇದೆ ಎಂದರೆ ಸರಿ . ಅದೇ ಪ್ರಕಾರ ನಿ.ಡಿ-44 ರಲ್ಲಿ ಸಿ ಟಿ ಎಸ್ ನಂ. 4335/ಎ ಎಂದು ನಮೂದು ಆಗಿದೆ ಎಂದರೆ ಸರಿ .

ನಾವು ಖರೀದಿ ಕೊಳ್ಳುವ ಪೂರ್ವದಲ್ಲಿ ಪ್ಲಾಟ ನಂ. 47 ಕ್ಕೆ ಮೊಹಮ್ಮದ ಶಫಿ ನದಾಫ ಇವರ ಹೆಸರು ದಾಖಲ ಆಗಿತ್ತು ಎಂದರೆ ಸರಿ. ಅವರ ಹೆಸರಿನಲ್ಲಿದ್ದ ಉತಾರಗಳನ್ನು ನ್ಯಾಯಾಲಯದಲ್ಲಿ ಹಾಜರ ಪಡಿಸಿರುವುದಿಲ್ಲ. ಸದ್ರಿ ದಾಖಲೆಗಳನ್ನು ಹಾಜರ ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ನಾನು ಖರೀದಿಸಿದ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ಪ್ಲಾಟ ನಂ. 33, ಪಶ್ಚಿಮಕ್ಕೆ ರಸ್ತೆ , ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಪ್ಲಾಟ ನಂ. 48 ಇರುತ್ತದೆ. ನಮ್ಮ ಖರೀದಿ ಪತ್ರದ ಪ್ರಕಾರ ಪಟ್ಟಣ ಪಂಚಾಯತಿಯವರು ಪರವಾನಿಗೆ ಕೊಟ್ಟಿರುತ್ತಾರೆ ಎಂದರೆ ಸರಿ. ಯಾವ ದಿನಾಂಕದಂದು ಪಟ್ಟಣ ಪಂಚಾಯತಿಗೆ ಪರವಾನಿಗೆಗಾಗಿ ಅರ್ಜಿ ಸಲ್ಲಿಸಿರುತ್ತೇನೆ ಎಂದು ನನಗೆ ನೆನಪಿಲ್ಲ. ಪರವಾನಿಗೆಯ ಅರ್ಜಿಯ ಜೊತೆಗೆ ಸಲ್ಲಿಸಿದ ದಾಖಲೆಗಳನ್ನು ಈ ನ್ಯಾಯಾಲಯದಲ್ಲಿ ಹಾಜರ ಪಡಿಸಿರುವುದಿಲ್ಲ. ಸದ್ರಿ ದಾಖಲೆಗಳನ್ನು ಹಾಜರ ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ.

ನಾವು 2015 ರಲ್ಲಿ ಮನೆ ಕಟ್ಟಲು ಪ್ರಾರಂಭಿಸಿರುತ್ತೇವೆ. ಆದರೆ ದಿನಾಂಕ ನೆನಪಿಲ್ಲ. ಅದೇ ಪ್ರಕಾರ 2015 ರಲ್ಲಿ ಆಸ್ತಿ ಮೇಲೆ ಸಾಲ ಪಡೆದಿರುತ್ತೇವೆ. 2016 ರಲ್ಲಿ ನನಗೆ ದಾವೆ ದಾಖಲ ಆಗಿ ನೋಟಿಸು ಬಂದಿತ್ತು ಎಂದರೆ ಸರಿ . ನಾನು ನಮ್ಮ ವಕೀಲರ ಮೂಲಕ ಹಾಜರ ಆಗಿರುತ್ತೇನೆ. ನಿ.ಡಿ-14 ರಂತೆ ನಾವು ತಹಶೀಲ್ದಾರ ಹುಕ್ಕೇರಿಯವರಿಗೆ ಪತ್ರ ಬರೆದಿರುತ್ತೇವೆ ಎಂದರೆ ಸರಿ . ನನಗೆ ಈ ಕೇಸು ಇದ್ದ ಬಗ್ಗೆ ಮಾಹಿತಿ ಇದ್ದರೂ ಸಹ ಪತ್ರ ಬರೆದಿರುತ್ತೇನೆ ಎಂದರೆ ಸರಿ. ನನ್ನ ಅಧಿಕಾರದ ವ್ಯಾಪ್ತಿಯಲ್ಲಿ ದಾವಾಸ್ತಿಯನ್ನು ಮುಂದೆ ನಿಂತು ಅಳತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರಶಾಂತ ಶೇಟ ಎನ್ನುವ ಭೂಮಾಪಕರು ಇದ್ದರು ಎಂದರೆ ಸರಿ .

7 ಎಕರೆ 13 ಗುಂಟೆ ಜಮೀನಿನಲ್ಲಿ ಎಷ್ಟು ಎಕರೆ ಬಿನ್ ಶೇತಗಿ ಇದೆ ಎಂದು ವರದಿ ಕೇಳಿ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದ ನಾನು 30 ಗುಂಟೆ

ಜಮೀನಿಗೆ ಮಾತ್ರ ನಾನು ಮಾಹಿತಿ ಕೇಳಿರುತ್ತೇನೆ. ಆ ಪ್ರಕಾರ ಸರ್ವೆ ನಂ. 118/ಅ/2 30 ಗುಂಟೆ ಜಮೀನು ಇವತ್ತಿಗೂ ಶೇತಗಿ ಜಮೀನು ಎಂದು ಇದೆ ಎಂದರೆ ಸರಿ . ಸಾಕ್ಷಿಗೆ ಸದ್ರಿ ಜಮೀನಿನ ಪಹಣಿ ಪತ್ರಿಕೆ ತೋರಿಸಲಾಗಿದೆ ಅದನ್ನು ನಿ.ಪಿ-18 ಎಂದು ಗುರುತಿಸಲಾಯಿತು.

( ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು)

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ